# ಗಜಾನನ ಮಹಾಲೆ ದತ್ತಿ



ಧಾರವಾಡ : ಪಾತ್ರಧಾರಿಗಳಿಗೆ ಭಾವನೆಗಳನ್ನು ತುಂಬುವುದೇ ಪ್ರಸಾದನ ಕಲೆಯಾಗಿದೆ ಎಂದು ಧಾರವಾಡ ಸಹಕಾರ ಇಲಾಖೆಯ ಉಪನಿಬಂಧಕರಾದ ಶ್ರೀಮತಿ ಸಾವಿತ್ರಿ ಕಡಿ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಗಜಾನನ ಮಹಾಲೆ ದತ್ತಿ ಅಂಗವಾಗಿ ದಿನಾಂಕ ೨೦-೧-೨೦೧೯ ರಂದು ಆಯೋಜಿಸಿದ್ದ **'ಸುಗಮ ಸಂಗೀತ ಹಾಗೂ ನಾಟಕ ಪ್ರದರ್ಶನ'**ದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಪಾತ್ರಧಾರಿಗಳಿಗೆ ನಾನು ಯಾವ ಪಾತ್ರವನ್ನು ಮಾಡುತ್ತಿದ್ದೇನೆ. ನಾನು ಅವನೇ ಎಂದು ಭಾವನೆ ಮೂಡುವುದು ಬಣ್ಣವನ್ನು ಹಚ್ಚಿಕೊಂಡ ಮೇಲೆ. ಆ ಬಣ್ಣ ಅವನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಅವನು ಕನ್ನಡಿಯಲ್ಲಿ ನೋಡಿಕೊಂಡಾಗ ನಾನು ಪಾತ್ರಧಾರಿಯಲ್ಲ. ನಾನು ಅವನೇ ಎನ್ನುವ ಭಾವನೆ ಮೂಡಿ ಅವನು ರಂಗದ ಮೇಲೆ ನಿರಾಳವಾಗಿ ತನ್ನ ಕಲೆಯನ್ನು ಪ್ರದರ್ಶಿಸುತ್ತಾನೆ. ಶ್ರೀ ಗಜಾನನ ಮಹಾಲೆ ಅವರು ತಮ್ಮ ಜೀವನದುದ್ದಕ್ಕೂ ಪ್ರಸಾದನದ ಸೇವೆ ಸಲ್ಲಿಸಿ ಸಾವಿರಾರು ನಾಟಕಗಳ ಪ್ರದರ್ಶನಕ್ಕೆ ಕಾರಣೀಭೂತರಾದವರು. ಆದರೆ, ಇವರಿಗೆ ಸರಕಾರದಿಂದಾಗಲಿ, ಜನರಿಂದಾಗಲಿ ಇವರು ಬದುಕಿದ್ದಾಗ ಸಿಗಬೇಕಾದ ಮಾನ್ಯತೆ ಸಿಗಲಿಲ್ಲ. ಯಾವ ಸರಕಾರಗಳೂ ಮಾಡದ ಕೆಲಸ ಕರ್ನಾಟಕ ವಿದ್ಯಾವರ್ಧಕ ಸಂಘ ಮಾಡುತ್ತಿದೆ. ಹಾಗೂ ಇಂಥ ಮಹನೀಯರ ಸ್ಮರಣೆ ಇಂದಿನ ಯುವಕರಿಗೆ ಅತ್ಯವಶ್ಯ. ಇಂದಿನ ಯುವಕರು ಇತಿಹಾಸವನ್ನು ಅವಲೋಕಿಸಿದಾಗ ಮಾತ್ರ ಅವರಿಗೆ ಮುಂದಿನ ಮಾರ್ಗದರ್ಶನ ಸಿಗುತ್ತದೆ. ನಾನು ಕೆ.ಎ.ಎಸ್. ವ್ಯಾಸಂಗ ಮಾಡುವಾಗ ಕರ್ನಾಟಕ ಏಕೀಕರಣದ ಬಗ್ಗೆ ಓದುತ್ತಿರುವಾಗ ಏಕೀಕರಣದ ಹೋರಾಟ ಕರ್ನಾಟಕ ವಿದ್ಯಾವರ್ಧಕ ಸಂಘದಿಂದಲೇ ಪ್ರಾರಂಭವಾಯಿತು. ಆಗ ನಾನು ಬಹಳಷ್ಟು ಸಂಘದ ಬಗ್ಗೆ ತಿಳಿದುಕೊಂಡಿದ್ದೆ. ನನ್ನ ಭಾಗ್ಯ ಧಾರವಾಡಕ್ಕೆ ವರ್ಗವಾಗಿ ಬಂದು ಈ ವಿದ್ಯಾವರ್ಧಕ ಸಂಘದಲ್ಲಿ ಇಂದು ಇಂಥ ಮಹಾನ್ ವ್ಯಕ್ತಿಯ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿರುವುದು ನಮಗೆ ಹೆಮ್ಮೆ ಎನಿಸುತ್ತಿದೆ. ಸುಮಾರು ೧೨೯ ವರ್ಷದಿಂದ ಕನ್ನಡ, ನಾಡು ನುಡಿ ಜಲ, ಗಡಿಗಳಿಗಾಗಿ ಸೇವೆ ಸಲ್ಲಿಸುತ್ತಿರುವ ಸಂಘವೆಂದರೇ ಅದು ಕರ್ನಾಟಕ ವಿದ್ಯಾವರ್ಧಕ ಸಂಘ ಎಂದು ಹೇಳಿದರು.

ಧಾರವಾಡ ಕೃಷಿ ವಿ.ವಿ.ಯ ಪ್ರಾಧ್ಯಾಪಕರಾದ ಡಾ. ಅನಿಲಕುಮಾರ ಮುಗಳಿ ಅತಿಥಿಗಳಾಗಿ ಆಗಮಿಸಿ, ಮಾತನಾಡುತ್ತಾ, ನಾನು ಸಹ ಒಬ್ಬ ರಂಗ ಕಲಾವಿದನಿದ್ದು, ಗಜಾನನ ಮಹಾಲೆ ಅವರಿಂದ ಬಣ್ಣ ಹಚ್ಚಿಸಿಕೊಂಡವನೇ, ಒಮ್ಮೆ ನಾನು ನಾಟಕದಲ್ಲಿ ದುರ್ಯೋಧನನ ಪಾತ್ರವನ್ನು ಮಾಡಿದ್ದೆ. ಗಜಾನನ ಮಹಾಲೆ ಅವರ ಹತ್ತಿರ ಬಣ್ಣವನ್ನು ಹಚ್ಚಿಸಿಕೊಂಡ ಮೇಲೆ ಕನ್ನಡಿಯಲ್ಲಿ ನೋಡಿಕೊಂಡೆ. ನಾನು ನಾನಾಗಿ ಉಳಿದಿದ್ದಿಲ್ಲ. ದುರ್ಯೋಧನನಾಗಿ ಆಗಿ ಪರಿವರ್ತನೆ ಆಗಿಬಿಟ್ಟಿದ್ದೆ. ನನ್ನ ಅಂತರಂಗದಲ್ಲಿ ನಾನು ದುರ್ಯೋಧನ ನಾನು ಅನಿಲಕುಮಾರ ಅಲ್ಲ ಎಂದು ಭಾವನೆ ಮೂಡಿ ವೇದಿಕೆಯ ಮೇಲೆ ನಿಜವಾದ ಮಹಾಭಾರತ ನಡೆದಿದೆ. ನಾನು ದುರ್ಯೋಧನನೆ ಅಂತಾ ಪಾತ್ರಕ್ಕೆ ಜೀವ ತುಂಬಿ ಪ್ರದರ್ಶನ ನೀಡಿದೆ. ಗಜಾನನ ಮಹಾಲೆ ಅವರ ವಿಶಿಷ್ಟ ಭಗವಂತನು ನೀಡಿದ ಕಲೆ ಎಂದರೆ ಇವರು ಯಾವುದೇ ತರಹದ ಪಾತ್ರಧಾರಿಗಳನ್ನ ಅದೇ ರೀತಿಯಾಗಿ ತಮ್ಮ ಪ್ರಸಾದನ ಕಲೆಯಿಂದ ತಯಾರುಮಾಡುತ್ತಿದ್ದರು. ಸಾಧಾರಣ ಮನುಷ್ಯನನ್ನು ರಾಕ್ಷಸನನ್ನಾಗಿ ಮಾಡುತ್ತಿದ್ದರು. ಧಾರವಾಡದಲ್ಲಿ ನಾನು ಕಂಡ ಅಪರೂಪದ ವ್ಯಕ್ತಿಗಳಿಬ್ಬರು. ಅವರು ಸೈಕಲ್ ಮೇಲೆಯೇ ಸವಾರಿ ಮಾಡುವವರು. ಒಬ್ಬರು ಕವಿಗಳಾದಂಥ ಡಾ.ವ್ಹಿ.ಸಿ. ಐರಸಂಗ, ಇನ್ನೊಬ್ಬರು ಗಜಾನನ ಮಹಾಲೆ ಅವರು. ಅತಿ ಸರಳೀಕರಣ ಜೀವನ ಇವರದು. ಇವರು ಯಾವತ್ತು ತಮ್ಮ ಕಲೆಗಳತ್ತ ಮುಖಮಾಡಿ ಕೆಲಸ ಮಾಡುವುದರಲ್ಲೇ ತಲ್ಲಿನರಾದವರು. ಇವತ್ತು ಪ್ರಶಸ್ತಿಗಳನ್ನು ಪಡೆಯಬೇಕಾದರೆ ವಸೂಲಿ, ಲಾಭಿ ಮಾಡಬೇಕು. ಆದರೆ. ಮಹಾಲೆಯವರು ತಮ್ಮ ಕಲೆಯಿಂದಲೇ ಪ್ರಶಸ್ತಿಯನ್ನು ಪಡೆದುಕೊಂಡವರು. ಇವರ ಹಾದಿಯಲ್ಲೇ ಇವರ ಮಗ ಸಂತೋಷ ಮಹಾಲೆಯವರು ಸಾಗುತ್ತಿರುವುದು ಸಂತೋಷದ ಸಂಗತಿ ಎಂದರು.

ವೇದಿಕೆ ಮೇಲೆ ಇನ್ನೋರ್ವ ಅತಿಥಿ ಗೋಕಾಕದ ಹೈಕೋರ್ಟ ವಕೀಲರಾದ ವಾಲಿ ಹಾಗೂ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ), ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಇದ್ದರು. ಪ್ರಾರಂಭದಲ್ಲಿ ಗಜಾನನ ಮಹಾಲೆ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವ ಸಲ್ಲಿಸಲಾಯಿತು. ಪ್ರಾರಂಭದಲ್ಲಿ ಕು. ಶ್ರೀ ಅಂಬೇಕರ ಹಾಗೂ ಸಂಗಡಿಗರು ಸುಗಮ ಸಂಗೀತ ಪ್ರಸ್ತುತಪಡಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ಸ್ವಾಗತಿಸಿದರು. ಮನೋಜ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಸತೀತ ತುರಮರಿ ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕೆ.ಎಚ್. ನಾಯಕ, ಬಿ.ಆಯ್. ಈಳಿಗೇರ, ಎಸ್.ಜಿ. ಪಾಟೀಲ, ಚನಬಸಪ್ಪ ಅವರಾಧಿ, ಎಂ.ಬಿ. ಹೆಗ್ಗೇರಿ, ಮಹಾಂತೇಶ ನರೇಗಲ್ಲ, ಅಶೋಕ ಸುಳ್ಳದ ದಂಪತಿಗಳು, ಬಾಬಾಜಾನ ಮುಲ್ಲಾ, ಸೇರಿದಂತೆ ಗಜಾನನ ಮಹಾಲೆ ಕುಟುಂಬದವರು ಉಪಸ್ಥಿತರಿದ್ದರು. ಕೊನೆಯಲ್ಲಿ ಕುಲಪುರೋಹಿತ ಡಾ. ಆಲೂರ ವೆಂಕಟರಾವ ಅವರ ಮೂಲ ಕಥೆಯ, ಸಂತೋಷ ಗಜಾನನ ಮಹಾಲೆ ನಾಟಕ ರೂಪಾಂತರ, ವಿಜಯೀಂದ್ರ ಅರ್ಚಕ ಪರಿಕಲ್ಪನೆ ಮತ್ತು ನಿರ್ದೇಶನದ 'ಭಕ್ತ ಕನಕದಾಸ' ನಾಟಕ ಪ್ರದರ್ಶನಗೊಂಡಿತು.

**ಸತೀಶ ತುರಮರಿ**
ಕಾರ್ಯಕಾರಿ ಸಮಿತಿ ಸದಸ್ಯರು